ದಿನಾಂಕ 18.01.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ- ಪ್ರತಿವಾದಿ ಪರ ವಕೀಲರಿಂದಃ-**

ನಾನು 2005 ರಿಂದ 1ನೇ ಪ್ರತಿವಾದಿ ಕ್ಲಬ್ ನ ಸದಸ್ಯನಾಗಿದ್ದೇನೆ. ನಾನು 2009 ರಿಂದ 2011 ರ ವರೆಗೆ ಸದರಿ ಕ್ಲಬ್ ನಲ್ಲಿ ಕಾರ್ಯದರ್ಶಿಯಾಗಿದ್ದೇನು. ನಾನು ಸದರಿ ಕ್ಲಬ್‌ನ ಕಾರ್ಯದರ್ಶಿ ಯಾಗಿದ್ದುದ್ದರಿಂದ ಕ್ಲಬ್ ನ ನಿಯಮಗಳ ಬಗ್ಗೆ ನನಗೆ ಚೆನ್ನಾಗಿ ತಿಳಿದಿದೆ. ನಾನು ಕಾರ್ಯದರ್ಶಿಯಾಗಿದ್ದಾಗ ಅಸ್ತಿತ್ವದಲ್ಲಿ ಇದ್ದ ಬೈಲಾದ ನಿಯಮಗಳು ಈಗಲೂ ಸಹಾ ಕೆಲವು ತಿದ್ದುಪಡಿಗಳನ್ನು ಹೊರತು ಪಡಿಸಿ ಅಸ್ತಿತ್ವದಲ್ಲಿ ಇವೆ. ದಾವೆಯನ್ನು ದಾಖಲಿಸಿದ ಸಂದರ್ಭದಲ್ಲಿ ಅಸ್ತಿತ್ವದಲ್ಲಿ ಇದ್ದ ಕ್ಲಬ್ ನ ಬೈಲಾದ ನಿಯಮಗಳ ಬಗ್ಗೆ ನನಗೆ ಮಾಹಿತಿ ಇದೆ. ನಿ.ಪಿ 13 ರ ನಿಯಮ 10 (ಜೆ ) ರಡಿಯಲ್ಲಿ ಕ್ಲಬ್ ನ ಕಾರ್ಯಕಾರಿ ಮಂಡಳಿಯವರು ಕ್ಲಬ್‌ನ ಸದಸ್ಯರ ಹಿತದೃಷ್ಟಿಗೆ ಸಂಬಂಧಿಸಿದಂತೆ ಕಾಲಕಾಲಕ್ಕೆ ನಿಯಾಮಾವಳಿಗಳಲ್ಲಿ ತಿದ್ದುಪಡಿ ಮಾಡುವ ಅಧಿಕಾರ ಇದೆ ಎಂದರೆ ಸರಿ. ಕಾರ್ಯಕಾರಿ ಮಂಡಳಿಯವರು ಮಾಡಿದ ನಿಯಮಗಳನ್ನು ಪಾಲಿಸುವುದು ಸದಸ್ಯರ ಕರ್ತವ್ಯವಾಗಿರುತ್ತದೆ ಎಂದರೆ ಸರಿ. ಕ್ಲಬ್ ನ ನಿಯಮಗಳಿಗೆ ಗೌರವ ಸೂಚಿಸುವುದು ಪ್ರತಯೊಬ್ಬ ಸದಸ್ಯರ ಕರ್ತವ್ಯವಾಗಿರುತ್ತದೆ ಎಂದರೆ ಸರಿ.

ನಾನು 2016ನೇ ಇಸವಿಯಲ್ಲಿ ಒಂದನೇ ಪ್ರತಿವಾದಿ ಸಂಸ್ಥೆಗೆ ಒಂದು ಪತ್ರವನ್ನು ಬರೆದಿರುತ್ತೇನೆ ಎಂದರೆ ಸರಿ, ಸದರಿ ಪತ್ರದ

ದೃಢೀಕೃತ ನಕಲನ್ನು ಸಾಕ್ಷಿಗೆ ತೋರಿಸಿದ್ದು, ಸಾಕ್ಷಿಯು ಸದರಿ ದಾಖಲೆಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿ.ಡಿ 1 ಎಂದು ಗುರುತಿಸಲಾಯಿತು. ನಾನು ನಿ.ಡಿ 1 ದಾಖಲೆಯಲ್ಲಿ ಕ್ಲಬ್ ನ ವ್ಯವಸ್ಥಾಪಕರಾದ ಗಗನ್ ರವರು ನನ್ನ ಜೊತೆ ಬ್ಯಾಡ್ಮಿಟನ್ ಆಡಲು ಅವಕಾಶ ಮಾಡಿಕೊಡುವಂತೆ ಕೋರಿಕೊಂಡಿರುತ್ತೇನೆ ಎಂದರೆ ಸರಿ. ನಿ.ಡಿ 1 ಪತ್ರಕ್ಕೆ ಪ್ರತ್ಯುತ್ತರವನ್ನು ಕ್ಲಬ್ ನ ಕಾರ್ಯದರ್ಶಿರವರು ನನಗೆ ನೀಡಿರುತ್ತಾರೆ ಎಂದರೆ ಸರಿ. ಸದರಿ ಪ್ರತ್ಯುತ್ತರದ ದೃಢೀಕೃತ ನಕಲನ್ನು ಸಾಕ್ಷಿಗೆ ತೋರಿಸಿದ್ದು, ಸಾಕ್ಷಿಯು ಸದರಿ ದಾಖಲೆಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿ.ಡಿ 2 ಎಂದು ಗುರುತಿಸಲಾಯಿತು.

ಬ್ಯಾಡ್ಮಿಟನ್ ಆಡಲು ಹೋದ ಸಂದರ್ಭದಲ್ಲಿ ಕ್ರಿಡಾಂಗಣದ ಹೊರಗಡೆ ಒಂದು ಅಧಿಕೃತ ಲೆಡ್ಜರ ಇದ್ದು, ಅದರಲ್ಲಿ ಭಾಗವಹಿಸುವ ಸದಸ್ಯರ ಹೆಸರು, ದಿನಾಂಕ, ಎಷ್ಟು ಜನ ಆಟವಾಡಲು ಬಂದಿದ್ದಾರೆ ಎಂಬುದನ್ನು ನಮೂದಿಸಿ ಸಹಿ ಮಾಡಬೇಕು ಎಂದರೆ ಸರಿ. ಲೆಡ್ಜರ ನ ದೃಢೀಕೃತ ನಕಲನ್ನು ಸಾಕ್ಷಿಗೆ ತೋರಿಸಿದ್ದು, ಸಾಕ್ಷಿಯು ಸದರಿ ದಾಖಲೆಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿ.ಡಿ 3 ಎಂದು ಗುರುತಿಸಲಾಯಿತು. ನಾನು ನಿ.ಡಿ 3 ರಲ್ಲಿ ಬರೆದಂತಹ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ 28.08.2017 ರಂದು ಕ್ಲಬ್ ನ ಕಾರ್ಯದರ್ಶಿಯು ನನಗೆ ಒಂದು ಲೆಟರ ಅನ್ನು ಕಳುಹಿಸಿರುತ್ತಾರೆ ಎಂದರೆ ಸರಿ. ದೃಢೀಕೃತ ನಕಲನ್ನು ಸಾಕ್ಷಿಗೆ ತೋರಿಸಿದ್ದು, ಸದರಿ ಲೆಟರ ನ ದೃಢೀಕೃತ ನಕಲನ್ನು ಸಾಕ್ಷಿಯು ನೋಡಿ ಗುರುತಿಸಿದ್ದರಿಂದ ಅದನ್ನು ನಿ.ಡಿ 4 ಎಂದು ಗುರುತಿಸಲಾಯಿತು. ನಾನು ನಿ.ಡಿ 1 ಮತ್ತು 3 ರ ಹಿನ್ನೆಲೆಯಲ್ಲಿ

ಕ್ಲಬ್ ನ ಕಾರ್ಯಕಾರಿ ಮಂಡಳಿಯ ವಿರುದ್ದ ನನಗೆ ದ್ವೇಷ ಇತ್ತು ಎಂದರೆ ಸರಿಯಲ್ಲ. ಬ್ಯಾಡ್ಮಿಟನ್ ಆಡುವ ಅಂಗಳವನ್ನು ಸಾಫ್ಟ್ ವುಡ್ ನಲ್ಲಿ ನಿರ್ಮಿಸಲಾಗಿರುತ್ತದೆ ಎಂದರೆ ಸರಿ. ಬ್ಯಾಡ್ಮಿಟನ್ ಅಂಗಳದಲ್ಲಿ ಬ್ಯಾಟ್ ಮಿಟನ್ ಆಡುವುದರ ಜೊತೆಗೆ ಅದರಲ್ಲಿ ಇಟ್ಟಿದ ಜಿಮ್ ಐಟಮ್ ಗಳನ್ನು ಮಾತ್ರ ಬಳಸಲು ಅವಕಾಶ ಮಾಡಿಕೊಟ್ಟು ನಿಯಮಾವಳಿಗಳನ್ನು ಮಾಡಲಾಗಿತ್ತು ಎಂದರೆ ಸರಿಯಲ್ಲ. ಅಂತಹ ನಿಯಮಾವಳಿಗಳನ್ನು ಮಾಡಿ ಪ್ರತಿಯೊಬ್ಬ ಸದಸ್ಯರು ಅದನ್ನು ಪಾಲಿಸಬೇಕೆಂದು ನೋಟೀಸ್ ಬೋರ್ಡ್ ನಲ್ಲಿ ಹಾಕಲಾಗಿತ್ತು ಎಂದರೆ ಸರಿಯಲ್ಲ. ಬ್ಯಾಡ್ಮಿಟನ್ ಆಡುವ ಸಂದರ್ಭದಲ್ಲಿ ನಿರ್ದಿಷ್ಟ ಪಡಿಸಿದ ಶೂ ಗಳನ್ನು ಬಳಸಬೇಕು ಎಂದರೆ ಸರಿ. ಬ್ಯಾಡ್ಮಿಟನ್ ಅಂಗಳದ ಸುತ್ತಲೂ ಇರುವ ಜಾಗದಲ್ಲಿ ಸ್ಕೇಟಿಂಗ್ ಮಾಡಬಾರದೆಂಬ ನಿಯಾಮಾವಳಿಗಳನ್ನು ಮಾಡಲಾಗಿದೆ ಎಂದರೆ ಸರಿಯಲ್ಲ. ಆ ರೀತಿ ನಿಯಾಮಾವಳಿಗಳು ಇದ್ದರೂ ಸಹಾ ನಾನು ಬ್ಯಾಡ್ಮಿಟನ್ ಅಂಗಳದ ಸುತ್ತಲೂ ಸ್ಕೇಟಿಂಗ್ ಮಾಡುತ್ತಿದ್ದೆನು ಎಂದರೆ ಸರಿಯಲ್ಲ. ನಾನು ಸ್ಪೋರ್ಟ್ ಕಾಂಪ್ಲೆಕ್ಸ್ ನ ಸಿಮೆಂಟ್ ಫ್ಲೋರಿಂಗ್ ನಲ್ಲಿ ಸ್ಕೇಟಿಂಗ್ ಮಾಡುತ್ತಿದ್ದೆನು. ನಾನು ಸ್ಕೇಟಿಂಗ್ ಮಾಡುತ್ತಿದ್ದ ಜಾಗ ಬ್ಯಾಡ್ಮಿಟನ್ ಕೋರ್ಟ್ ನ ಪಕ್ಕದಲ್ಲಿ ಇತ್ತು. ನಾನು ಸ್ಕೇಟಿಂಗ್ ಮಾಡುತ್ತಿದ್ದ ವಿಚಾರಕ್ಕೆ ಸಂಬಂಧಿಸಿದಂತೆ ಕ್ಲಬ್‌ನ ಸಿಬ್ಬಂದಿಯಾದ ಗಣೇಶ್‌ರವರು ಕಾರ್ಯಕಾರಿ ಮಂಡಳಿಗೆ ನನ್ನ ವಿರುದ್ದ ದೂರನ್ನು ದಾಖಲಿಸಿದ್ದರು ಎಂದರೆ ಸರಿಯಲ್ಲ.

ಕಾರ್ಯಕಾರಿ ಮಂಡಳಿಯವರು ನನಗೆ ನಿ.ಪಿ 6 ರಂತೆ ಕಾರಣ ಕೇಳಿ ನೋಟೀಸನ್ನು ನೀಡಿದ್ದರು ಎಂದರೆ ಸರಿ. ನಿ.ಪಿ 4 ದಾಖಲೆಯು ಗಣೇಶ್ ರವರು ನನ್ನ ವಿರುದ್ದ ದೂರನ್ನು ಕ್ಲಬ್

ನ ಕಾರ್ಯದರ್ಶಿ ಯವರಿಗೆ ನೀಡಿರುವಂತೆ ಕಾಣುತ್ತದೆ. ಕ್ಲಬ್ ನ ನಿಯಮಗಳನ್ನು ಉಲ್ಲಂಘನೆ ಮಾಡಿದ ಸಂದರ್ಭದಲ್ಲಿ ಕಾರ್ಯಕಾರಿ ಮಂಡಳಿಯು ಕ್ಲಬ್ ನ ಸದಸ್ಯರಿಗೆ ಕಾರಣ ಕೇಳಿ ನೋಟೀಸನ್ನು ಕೊಡುವ ಅಧಿಕಾರ ಇದ್ದು, ಸದರಿ ನೋಟೀಸಿಗೆ ಸಂಬಂಧ ಪಟ್ಟ ಸದಸ್ಯರು ಉತ್ತರ ನೀಡಬೇಕಾಗುತ್ತದೆ ಎಂದರೆ ಸರಿ. ನಾನು ಕಾರಣ ಕೇಳಿ ನೀಡಿದ ನೋಟೀಸಿಗೆ ಸಮಂಜಸವಾದ ಉತ್ತರವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಕಾರಣ ಕೇಳಿ ನೋಟೀಸನ್ನು ಸದಸ್ಯರಿಗೆ ನೀಡಿದಾಗ ಅವರು ಮೊದಲು ಉತ್ತರ ಕೊಟ್ಟು ನಂತರ ಕಾರ್ಯಕಾರಿ ಮಂಡಳಿ ಕರೆದಾಗ ಅವರ ಮುಂದೆ ಹಾಜರಾಗಬೇಕು ಎಂದರೆ ಸರಿ.

ನಾನು ಕ್ಲಬ್ ನ ಕಾರ್ಯದರ್ಶಿಯಾಗಿದ್ದ ಸಂದರ್ಭದಲ್ಲಿ ಆಗಿನ ಕ್ಲಬ್ ನ ಮೂರು ಜನ ಸದಸ್ಯರು ಒಂದು ಔತಣ ಕೂಟದಲ್ಲಿ ದುರ್ನಡತೆ ನಡೆಯಿತು ಎಂಬ ಪುಕಾರಿನ ಮೇರೆಗೆ ಅವರುಗಳಿಗೆ ನಾನು ಕಾರಣ ಕೇಳಿ ನೋಟೀಸನ್ನು ನೀಡಿದ್ದು, ಸದರಿ ನೋಟೀಸುಗಳಿಗೆ ಸದಸ್ಯರು ಕ್ಷಮೆ ಯಾಚನೆ ಕೋರಿ ಬರವಣಿಗೆಯ ರೂಪದಲ್ಲಿ ನೀಡಿದ ಮೇರೆಗೆ ಮುಂದೆ ಆ ರೀತಿಯ ತಪ್ಪು ಮಾಡದಂತೆ ಅವರಿಗೆ ಹೆಚ್ಚರಿಕೆ ನೀಡಲಾಗಿರುತ್ತದೆ ಎಂದರೆ ಸರಿ. ಸದರಿ ನೋಟೀಸು ಮತ್ತು ಕ್ಷಮೆಯಾಚನೆ ಪತ್ರಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅವುಗಳನ್ನು ನಿ.ಡಿ 5 ರಿಂದ 7 ಎಂದು ಗುರುತಿಸಲಾಯಿತು. ಸಾಮಾನ್ಯವಾಗಿ ಕಾರಣ ಕೇಳಿ ನೋಟೀಸ್ ಅನ್ನು ನೀಡಿದ ಕೂಡಲೇ ಸದಸ್ಯರಿಗೆ ದಂಡನೆಯನ್ನು ವಿಧಿಸಬೇಕೆಂಬ ನಿಯಮ ಏನು ಇಲ್ಲ, ಆದರೆ ಅವರು ಕಾರ್ಯಕಾರಿ ಮಂಡಳಿ ಮುಂದೆ

ಹಾಜರಾಗಬೇಕು ಎಂದರೆ ಸರಿ. ನಿ.ಪಿ 10 ಮತ್ತು 11 ರಂತೆ ಕಾರ್ಯಕಾರಿ ಮಂಡಳಿಯ ಮುಂದೆ ಹಾಜರಾಗಲು ನನಗೆ ನೋಟಿಸ್ ಅನ್ನು ನೀಡಲಾಗಿತ್ತು ಎಂದರೆ ಸರಿ. ನಿ.ಪಿ 10 ಮತ್ತು 11 ನ್ನು ನಾನು ಸ್ವೀಕರಿಸಿದ ಬಳಿಕ ನನಗೆ ಕಾರ್ಯಕಾರಿ ಮಂಡಳಿಯ ಮುಂದೆ ಹಾಜರಾಗಲು ಸಾಧ್ಯವಾಗಿರುವುದಿಲ್ಲ. ಕಾರ್ಯಕಾರಿ ಮಂಡಳಿ ಯವರು ನನ್ನ ವಿರುದ್ದ ತನಿಖೆಯನ್ನು ನಡೆಸಲು ಒಂದು ಕಮಿಟಿಯನ್ನು ರಚಿಸಿ ಅದರ ಮುಂದೆ ಹಾಜರಾಗಲು ನಿ.ಪಿ 15 ಮತ್ತು 17 ರಂತೆ ನೋಟೀಸ್ ಗಳನ್ನು ನೀಡಿದ್ದರು ಎಂದರೆ ಸರಿ. ಸದರಿ ಕಮಿಟಿಯಲ್ಲಿ ಸಿ.ಕೆ ಉತ್ತಪ್ಪ, ಸಿ.ಬಿ ದೇವಯ್ಯ ಮತ್ತು ಕೆ.ಸಿ ಗಣಪತಿಯವರು ತನಿಖಾ ಸದಸ್ಯರಾಗಿದ್ದರು ಎಂದರೆ ಸರಿ. ತನಿಖಾ ಕಮಿಟಿಯ ಮುಂದೆ ಹಾಜರಾಗಲು ನನಗೆ ನೋಟೀಸನ್ನು ನೀಡಿದ್ದರೂ ಸಹಾ ನಾನು ಕಮಿಟಿಯ ಮುಂದೆ ಹಾಜರಾಗಿರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ಕಾಫಿ ಸೀಸನ್ ನಲ್ಲಿ ಸಂಜೆ 7 ಗಂಟೆ ಸಮಯದಲ್ಲಿ ಹಾಜರಾಗಲು ಸೂಚಿಸಿದ್ದರಿಂದ ನನಗೆ ಹಾಜರಾಗಲು ಸಾಧ್ಯವಾಗಲಿಲ್ಲ ಎಂದು ಉತ್ತರಿಸಿರುತ್ತಾರೆ.

ನನಗೆ ತನಿಖಾ ಕಮಿಟಿಯ ಮುಂದೆ ಎರಡು ಭಾರಿ ಹಾಜರಾಗಲು ಅವಕಾಶ ನೀಡಿದ್ದರೂ ಸಹಾ ನಾನು ಹಾಜರಾಗಿರುವುದಿಲ್ಲ ಎಂದರೆ ನನಗೆ ಹಾಜರಾಗಲು ಸಾಧ್ಯವಾಗಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ತನಿಖಾ ಕಮಿಟಿಯ ಮುಂದೆ ಹಾಜರಾಗಲು ನನಗೆ ಸಾಕಷ್ಟು ಸಮಯಾವಕಾಶ ಇದ್ದರೂ ಸಹಾ ನಾನು ಉದ್ದೇಶ ಪೂರ್ವಕವಾಗಿ ಗೈರು ಹಾಜರಾಗಿರುತ್ತೇನೆ ಎಂದರೆ ಸರಿಯಲ್ಲ. ನಾನು ಕಾರ್ಯಕಾರಿ ಮಂಡಳಿಯವರ ಮುಂದೆ ಹಾಜರಾಗದೇ ಹಾಗೂ

ತನಿಖಾ ಕಮಿಟಿಯ ಮುಂದೆ ಹಾಜರಾಗದೇ ಅಶಿಸ್ತನ್ನು ತೋರಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಅಶಿಸ್ತಿನ ನಡವಳಿಕೆಗಳ ಆಧಾರದ ಮೇಲೆ ತನಿಖಾ ಕಮಿಟಿಯವರು ತನಿಖೆಯನ್ನು ಪೂರ್ಣಗೊಳಿಸಿ ನನ್ನ ವಿರುದ್ದ ನಿ.ಪಿ 20 ರಂತೆ ನನ್ನ ವಿರುದ್ದ ಶಿಸ್ತು ಕ್ರಮ ತೆಗೆದುಕೊಳ್ಳಲು ಶಿಪಾರಸ್ಸು ಮಾಡಿರುತ್ತಾರೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**ಮರು ವಿಚಾರಣೆಃ- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ) ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.